**27 ಲಕ್ಷ ರೈತರ ದತ್ತಾಂಶ ಅಂತಿಮ** | **ಲಭ್ಯ ಮೊತ್ತದಲ್ಲಿ 2,700 ಕೋಟಿ ರೂ ಬೆಳೆ ಪರಿಹಾರಕ್ಕೆ ವೆಚ್ಚ ಸಾಧ್ಯತೆ**

# ಬೆಳೆ ನಷ್ಟ ಪರಿಹಾರ, ರೈತರ ಬ್ಯಾಂಕ್ ಖಾತೆಗೆ 6ರಿಂದ ಜಮಾ


■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಎನ್‌ಡಿಆರ್‌ಎಫ್ ನಿಯಮಗಳಂತೆ ಅನುಮೋದನೆ ಪ್ರಕ್ರಿಯೆ, ಚುನಾವಣಾ ಆಯೋಗದ ಅನುಮತಿ, ಕಾನೂನು ಸಮರದ ಘಟ್ಟವನ್ನು ದಾಟಿದ ಬೆಳೆ ನಷ್ಟ ಪರಿಹಾರ, ಅರ್ಹ ರೈತರ ಬ್ಯಾಂಕ್ ಖಾತೆಗೆ ಸೋಮವಾರದಿಂದ ಜಮಾ ಶುರುವಾಗಲಿದೆ.

ಮಳೆ ಕೈಕೊಟ್ಟಿದ್ದರಿಂದ ಮುಂಗಾರು ಜತೆಗೆ ಹಿಂಗಾರು ಬೆಳೆಯ ನಷ್ಟವನ್ನೂ ಅನುಭವಿಸಿದ ರೈತರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಈಗ ಮುಂಗಾರು ಹಂಗಾಮಿನ ಬೆಳೆ ಹಾನಿ ನೆರವು ರೈತರ ಬ್ಯಾಂಕ್ ಖಾತೆಗೆ ನಗದು ನೇರ ವರ್ಗಾವಣೆ (ಡಿಬಿಟಿ)ಯಾಗಲಿದೆ. ಬರಪೀಡಿತವೆಂದು ಘೋಷಿಸಿದ ಎಂಟು ತಿಂಗಳ ಬಳಿಕ, ಮಧ್ಯಂತರ ಪರಿಹಾರ ತಲಾ ಎರಡು ಸಾವಿರ ರೂ. ಪಾವತಿಸಿದ ನಾಲ್ಕು ತಿಂಗಳ ಬಳಿಕ ಅಂತಿಮ ಮೊತ್ತ ತಲುಪಲಿದ್ದು, ಅನ್ನದಾತರು ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಮಾಡಿದೆ. ಕೇಂದ್ರ ಸರ್ಕಾರ 3,454.22 ಕೋಟಿ ರೂ. ಎನ್‌ಡಿಆರ್‌ಎಫ್ ನೆರವು ಘೋಷಿಸಿದ ವಾರದೊಳಗೆ ಹಣ ಬಿಡುಗಡೆ ಪತ್ರವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿದೆ. ಬೆಳೆ ಹಾನಿ ಇನ್ಪುಟ್ ಸಬ್ಸಿಡಿಗೆ ರೈತರು ಚಾತಕಪಕ್ಷಿಯಂತೆ ಕಾಯುತ್ತಿದ್ದಾರೆ. ಮಂಜೂರಾತಿ ಪತ್ರದ ನಿರೀಕ್ಷೆಯಲ್ಲಿ ಕಾಲ ಕಳೆದರೆ ಇನ್ನಷ್ಟು ವಿಳಂಬವಾಗಲಿದೆ ಎಂದು ರಾಜ್ಯ ಸರ್ಕಾರ ಅರಿತು, ಪರಿಹಾರ ಪಾವತಿಗೆ ಚಾಲನೆ ನೀಡಿದೆ.

**ದತ್ತಾಂಶ ಅಂತಿಮ:** ಇಲಾಖೆ ಮೂಲಗಳ ಪ್ರಕಾರ ಬೆಳೆ ಹಾನಿ ಅನುಭವಿಸಿದ ಅರ್ಹ ರೈತರ 34 ಲಕ್ಷ ಎಂದು ಅಂದಾಜಿಸಲಾಗಿದೆ. ಬೆಳೆ ಯಾವುದು, ಜಮೀನಿನ ಪ್ರಮಾಣ, ಪರಿಹಾರ ಮೊತ್ತವೆಷ್ಟು ಎಂದು 'ಫ್ರೂಟ್ಸ್' ತಂತ್ರಾಂಶದಲ್ಲಿ ಲೆಕ್ಕ ಹಾಕಿ, 27 ಲಕ್ಷ ರೈತರ ದತ್ತಾಂಶವನ್ನು ಅಂತಿಮಗೊಳಿಸಲಾಗಿದೆ. ಬೆಳೆ ಪರಿಹಾರ ಪಾವತಿಸಲು ಚುನಾವಣೆ ಆಯೋಗದ ಸಹಮತಿ ಲಭಿಸಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಒಪ್ಪಿಗೆ ಪಡೆದಿದ್ದು, ಸೋಮವಾರ (ಮೇ 6)ದಿಂದ ಆಯಾ ರೈತರ ಬ್ಯಾಂಕ್ ಖಾತೆಗೆ ನಗದು ನೇರ ವರ್ಗಾವಣೆ ಪ್ರಕ್ರಿಯೆ ಶುರುವಾಗಲಿದೆ. ಬುಧವಾರದೊಳಗೆ ನಗದು ನೇರ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

**2,700 ಕೋಟಿ ರೂ. ವೆಚ್ಚ ಸಾಧ್ಯತೆ:** ಎಸ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಅರ್ಹ ರೈತರಿಗೆ ಬೆಳೆ ಪರಿಹಾರ ಪಾವತಿಸಲು 2,700 ಕೋಟಿ ರೂ. ವೆಚ್ಚವಾಗುವ ಸಾಧ್ಯತೆಗಳಿವೆ. ಮಧ್ಯಂತರ ಪರಿಹಾರವಾಗಿ ನೀಡಿದ 2 ಸಾವಿರ ರೂ. ಮುರಿದುಕೊಂಡು ಉಳಿದ ಮೊತ್ತವನ್ನು ರೈತರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ. ಎನ್‌ಡಿಆರ್‌ಎಫ್ ನಿಯಮಾವಳಿ ಪ್ರಕಾರ ಬೆಳೆ ನಷ್ಟಕ್ಕೆ 4,663.12 ಕೋಟಿ ರೂ. ಬಾಧಿತ ಕುಟುಂಬಗಳ ನೆರವಿಗೆ 12,577.90, ಕುಡಿಯುವ ನೀರು ಇತ್ಯಾದಿ ಸೇರಿ ಒಟ್ಟು 18,171.44 ಕೋಟಿ ರೂ.ಗಳ ಪ್ರಸ್ತಾವನೆಯನ್ನು ಕೇಂದ್ರಕ್ಕೆ ಸಲ್ಲಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರ 3,454.22 ಕೋಟಿ ರೂ. ಬರ ಪರಿಹಾರವೆಂದು ಬಿಡುಗಡೆ ಮಾಡಿದೆ. ಈ ಮೊತ್ತದಲ್ಲಿ ಬೆಳೆ ಪರಿಹಾರ, ಬಾಧಿತರಿಗೆ ನೆರವು, ಕುಡಿಯುವ ನೀರು ಇತ್ಯಾದಿಗೆ ಕೊಟ್ಟಿದ್ದೆಷ್ಟು ? ಕೈ ಬಿಟ್ಟಿರುವುದೆಷ್ಟು ? ಎಂಬ ನಿರ್ದಿಷ್ಟ ಮಾಹಿತಿ ಮಂಜೂರಾತಿ ಪತ್ರ ತಲುಪಿದ ನಂತರ ತಿಳಿಯಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.



ಕೇಂದ್ರದಿಂದ ಬಂದಿರುವ ಹಣ ಬಿಡುಗಡೆ ಪತ್ರದ ಆಧಾರದಲ್ಲಿ ರೈತರ ಬ್ಯಾಂಕ್ ಖಾತೆಗೆ ಬೆಳೆ ಹಾನಿ ಪರಿಹಾರ (ಇನ್ಪುಟ್ ಸಬ್ಸಿಡಿ)ದ ನಗದು ನೇರ ವರ್ಗಾವಣೆಗೆ ಉಪಕ್ರಮವಹಿಸಲಾಗಿದೆ. ಕೇಂದ್ರದ ಮಂಜೂರಾತಿ ಪತ್ರ ತಲುಪಿದ ನಂತರ 3,454 ಕೋಟಿ ರೂ.ಗಳಲ್ಲಿ ಯಾವುದಕ್ಕೆ ಎಷ್ಟು ಮೊತ್ತ ? ಎಂದು ನಿರ್ದಿಷ್ಟವಾಗಿ ತಿಳಿಯಲಿದೆ.

| ಕೃಷ್ಣಬೈರೇಗೌಡ ಕಂದಾಯ ಸಚಿವ

### ಅಂಕಿ-ಅಂಶ ನೋಟ

| | |
|---|---|
| ಬರ ಪೀಡಿತ ತಾಲೂಕುಗಳು | 223 |
| ಬೆಳೆ ಹಾನಿ ಪ್ರದೇಶದ ಅಂದಾಜು | 48.19 ಲಕ್ಷ ಹೆಕ್ಟೇರ್ |
| ನಷ್ಟದ ಅಂದಾಜು ಒಟ್ಟು ಮೊತ್ತ | 35,162.05 ಕೋಟಿ ರೂ. |
| ಕೇಂದ್ರಕ್ಕೆ ಕೇಳಿದ ಬೆಳೆ ಪರಿಹಾರ ಮೊತ್ತ | 4,663.12 ಕೋಟಿ ರೂ. |
| ಕೇಂದ್ರದಿಂದ ಬರ ಪರಿಹಾರಕ್ಕೆ ಬಿಡುಗಡೆ ಮೊತ್ತ | 3,454.22 ಕೋಟಿ ರೂ. |

### ರಾಜ್ಯ ಸರ್ಕಾರ ನಿಗದಿಪಡಿಸಿದ ಪರಿಹಾರ
ಪ್ರತಿ ಹೆಕ್ಟೇರ್ (ಗರಿಷ್ಠ ಎರಡು ಹೆಕ್ಟೇರ್)ಗೆ ಮೊತ್ತ (ರೂ.ಗಳಲ್ಲಿ)

| | |
|---|---|
| ಮಳೆಯಾಶ್ರಿತ/ ಖುಷ್ಕಿ | 8,500 |
| ನೀರಾವರಿ | 17,000 |
| ಬಹುವಾರ್ಷಿಕ/ತೋಟಗಾರಿಕೆ | 22,500 |

### ಬೆಳೆ ಪರಿಹಾರದ ಲೆಕ್ಕ

- ಮೊದಲ ಕಂತಿನಲ್ಲಿ ತಲಾ ಎರಡು ಸಾವಿರ ರೂ. ಪಾವತಿ: ಅರ್ಹ ರೈತರು 33.60 ಲಕ್ಷ
- ಎಸ್‌ಡಿಆರ್‌ಎಫ್‌ನಡಿ ಭರಿಸಿದ ಒಟ್ಟು ವೆಚ್ಚ: 636.44 ಕೋಟಿ ರೂ.
- ಪರಿಹಾರ ಮೊತ್ತಕ್ಕೆ ಅರ್ಹ ರೈತರ ಅಂದಾಜು: 34 ಲಕ್ಷ
- ಮೊದಲ ಕಂತಿನ ಪರಿಹಾರಕ್ಕೆ ಚುಕ್ತಾ ಆದ ಅರ್ಧ, ಅದಕ್ಕಿಂತ ಕಡಿಮೆ ಜಮೀನಿರುವ ರೈತರ ಅಂದಾಜು ಸಂಖ್ಯೆ : 2 ಲಕ್ಷ
- ಬಾಕಿ ಪರಿಹಾರಕ್ಕೆ ದತ್ತಾಂಶ ಅಂತಿಮವಾದ ಅರ್ಹ ರೈತರ ಸಂಖ್ಯೆ: 27 ಲಕ್ಷ
- ಪರಿಹಾರಕ್ಕೆ ಅಂದಾಜಿಸಿದ ವೆಚ್ಚ : 2,700 ಕೋಟಿ ರೂ.
- ಇನ್ನುಳಿದ ಅರ್ಹ ರೈತರ ದತ್ತಾಂಶ 'ಫ್ರೂಟ್ಸ್' ತಂತ್ರಾಂಶದಲ್ಲಿ ಸೇರ್ಪಡೆ ಪ್ರಕ್ರಿಯೆ ಚಾಲ್ತಿ

**04-05-2024 Vijayavani Pg 01**

---

ಭಾರತದ ಕಾಫಿಗೆ ವಿದೇಶಗಳಲ್ಲಿ ಭಾರಿ ಬೇಡಿಕೆ

# ಕಾಫಿ ಪ್ರಿಯರಿಗೆ ಸುಡಲಿದೆ ತುಟಿ

■ ಶ್ರೀಕಾಂತ್ ಹುಣಸವಾಡಿ ಬೆಂಗಳೂರು
Srikanth.G@timesgroup.com

ಕಾಫಿ ಪ್ರಿಯರಿಗೆ ಕಹಿ ಸುದ್ದಿ. ಮುಂದಿನ ದಿನಗಳಲ್ಲಿ ಕಾಫಿ ನಿಮ್ಮ ತುಟಿ ಸುಡಲಿದೆ. ಅರ್ಥಾತ್ ನೀವು ಬೆಳಗಾಗೆದ್ದು ಕುಡಿಯುವ ಕಾಫಿ ಬೆಲೆ ಏರಿಕೆಯಾಗಲಿದೆ.

ಸದ್ಯ ಸಾಮಾನ್ಯ ಹೋಟೆಲ್‌ಗಳಲ್ಲಿ 15 ರಿಂದ 20 ರೂ. ಮತ್ತು ಸ್ವಲ್ಪ ಹೈಟೆಕ್ ಹೋಟೆಲ್‌ಗಳಲ್ಲಿ 40 ರಿಂದ 100 ರೂ. ಮತ್ತು ವಿಶೇಷ ಕಾಫಿ ಪಾರ್ಲರ್‌ಗಳಲ್ಲಿ 80ರಿಂದ 800 ರೂ. ಇರುವ ಕಾಫಿ ಬೆಲೆ, ಇನ್ನು ಕೆಲವೇ ದಿನಗಳಲ್ಲಿ ಕನಿಷ್ಠ 5-10ರಿಂದ 30-40 ರೂ. ಏರಿಕೆಯಾದರೂ ಅಚ್ಚರಿ ಏನಿಲ್ಲ. ಗುಣಮಟ್ಟದ ಕಾಫಿ ಕುಡಿಯಬೇಕೆಂದರೆ ಸ್ವಲ್ಪ ಹೆಚ್ಚಿನ ಹಣ ತೆರಲು ಮುಂದಾಗಬೇಕಾಗುತ್ತದೆ.

ಅತ್ತ ಪ್ರತಿಕೂಲ ಹವಾಮಾನದ ಪರಿಣಾಮ ಪ್ರಮುಖ ಕಾಫಿ ಉತ್ಪಾದನಾ ರಾಷ್ಟ್ರಗಳಾದ ಬ್ರೆಜಿಲ್ ಮತ್ತು ವಿಯೆಟ್ನಾಂಗಳಲ್ಲಿ ನಿರೀಕ್ಷಿತ ಕಾಫಿ ಉತ್ಪಾದನೆಯಾಗದ ಹಿನ್ನೆಲೆಯಲ್ಲಿ ಜಾಗತಿಕ ಮಟ್ಟದಲ್ಲಿ ಕಾಫಿ ಕೊರತೆ ಉಂಟಾಗಿದೆ. ಅದರ ಪರಿಣಾಮ ಭಾರತದ ಕಾಫಿಗೆ ಎಲ್ಲಿಲ್ಲದ ಬೇಡಿಕೆ ಎದುರಾಗಿದೆ. ಕಾಫಿ ಮಂಡಳಿಯ ಅಂಕಿ-ಅಂಶಗಳ ಪ್ರಕಾರ, ಕಳೆದ ಏಪ್ರಿಲ್ ತಿಂಗಳೊಂದರಲ್ಲೇ 40 ಸಾವಿರದ 434 ಮೆಟ್ರಿಕ್ ಟನ್ ಕಾಫಿ ದೇಶದಿಂದ ವಿದೇಶಗಳಿಗೆ ರಫ್ತಾಗಿದೆ. ಮುಂದಿನ ದಿನಗಳಲ್ಲಿ ಇದು ಇನ್ನೂ ಹೆಚ್ಚಾಗಲಿದೆ. ಇದು ಭಾರತದ ಕಾಫಿಗೆ ಇರುವ ಜಾಗತಿಕ ಬೇಡಿಕೆಯ ಸೂಚಕವಾಗಿದೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರಿ ಬೇಡಿಕೆಯಿಂದಾಗಿ ಕಾಫಿ ಬೀಜದ ಬೆಲೆ ಗಗನಮುಖಿಯಾಗಿರುವ ಹಿನ್ನೆಲೆಯಲ್ಲಿ ಸ್ಥಳೀಯವಾಗಿ ಕಾಫಿ ಬೀಜಕ್ಕೆ ಭಾರಿ ಬೇಡಿಕೆ ಎದುರಾಗಿದ್ದು, ಬೆಲೆಯೂ ದಿನೇದಿನೆ ಹೆಚ್ಚಾಗುತ್ತಲೇ ಇದೆ. ಏಪ್ರಿಲ್ ತಿಂಗಳಲ್ಲಿ ಕಾಫಿ ಬೀಜದ ಬೆಲೆ ಮೂರ್‍ನಾಲ್ಕು ಬಾರಿ ಏರಿಕೆ ಕಂಡಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಾಗುವ ನಿರೀಕ್ಷೆ ಇದೆ ಎನ್ನುತ್ತಾರೆ ಕಾಫಿ ಪುಡಿ ಮಾರಾಟಗಾರರು.

**ರಫ್ತು ಹೆಚ್ಚಳದಿಂದ ಸ್ಥಳೀಯವಾಗಿ ಪೂರೈಕೆ ಕುಸಿತ**

**ಜಾಗತಿಕ ಮಾರುಕಟ್ಟೆ ಅವಲಂಬನೆ**

"ಭಾರತದ ಕಾಫಿ ಮಾರುಕಟ್ಟೆ ಸದಾ ಜಾಗತಿಕ ಮಾರುಕಟ್ಟೆಯನ್ನು ಅವಲಂಬಿಸಿದೆ. ಜಾಗತಿಕ ಮಟ್ಟದಲ್ಲಿ ಬೆಲೆ ಏರಿಕೆ-ಇಳಿಕೆ ಕಂಡರೆ ದೇಶೀಯ ಮಾರುಕಟ್ಟೆಯಲ್ಲೂ ಅದೇ ರೀತಿಯ ಏರಿಳಿತವಾಗಲಿದೆ. ಹಾಗಾಗಿ, ಸದ್ಯ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೆಲೆ ಏರಿಕೆ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಬೆಲೆ ಹೆಚ್ಚಳವಾಗಿದೆ," ಎನ್ನುತ್ತಾರೆ ಕಾಫಿ ಮಂಡಳಿ ಸಿಇಒ ಕೆ.ಜಿ.ಜಗದೀಶ್.

ಸದ್ಯ ಜಾಗತಿಕ ಮಾರುಕಟ್ಟೆಯಲ್ಲಿ ಕಾಫಿ ಬೆಲೆ ಗಗನಮುಖಿಯಾಗಿರುವ ಹಿನ್ನೆಲೆಯಲ್ಲಿ ಭಾರತದಲ್ಲೂ ಬೆಲೆ ಏರಿಕೆಯಾಗಿದೆ. ಇದರಿಂದ ಕಾಫಿ ಬೆಳೆಗಾರರು ಖುಷಿಯಾಗಿದ್ದು, ಕಳೆದ 15 ವರ್ಷಗಳಲ್ಲಿಯೇ ಅತ್ಯಧಿಕ ಬೆಲೆ ಪಡೆಯುತ್ತಿದ್ದಾರೆ. ಕಾಫಿ ಉತ್ಪಾದನೆಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದ್ದು, ಭಾರತದಲ್ಲಿ ಉತ್ಪಾದನೆಯಾಗುವ ಶೇ. 71ರಷ್ಟನ್ನು ರಾಜ್ಯವೇ ಉತ್ಪಾದನೆ ಮಾಡುತ್ತದೆ. ವಿಶೇಷವಾಗಿ ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳು ಕಾಫಿಗೆ ಹೆಸರುವಾಸಿಯಾಗಿವೆ. ಉಳಿದಂತೆ ಕೇರಳ ಶೇ.21 ಮತ್ತು ತಮಿಳುನಾಡು ಶೇ.5ರಷ್ಟು ಕಾಫಿ ಉತ್ಪಾದನೆ ಮಾಡುತ್ತವೆ. ಅದರಲ್ಲೂ ಕರ್ನಾಟಕದ ಕಾಫಿ ಉತ್ತಮ ಗುಣಮಟ್ಟದಿಂದ ಕೂಡಿರುವ ಹಿನ್ನೆಲೆಯಲ್ಲಿ ಅದಕ್ಕೆ ಮೊದಲಿನಿಂದಲೂ ಬೇಡಿಕೆ ಇದ್ದೇ ಇದೆ. ರಾಜ್ಯದಲ್ಲಿ ಉತ್ಪಾದನೆಯಾಗುವ ಬಹುತೇಕ ಕಾಫಿ ವಿದೇಶಗಳಿಗೆ ರಫ್ತಾಗುತ್ತದೆ.




ರಾಜ್ಯದಲ್ಲಿ ಕಾಫಿ ಬೀಜದ ಬೆಲೆ ಸದಾ ಜಾಗತಿಕ ಮಾರುಕಟ್ಟೆ ಮೇಲೆ ಅವಲಂಬಿತವಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾಫಿಗೆ ಹೆಚ್ಚಿನ ಬೇಡಿಕೆ ಎದುರಾಗಿದ್ದು, ಬಹುತೇಕ ರಾಜ್ಯದ ಕಾಫಿ ರಫ್ತಾಗುತ್ತಿರುವುದರಿಂದ ಸ್ಥಳೀಯವಾಗಿ ಬೆಲೆ ಏರಿಕೆಯಾಗಿದೆ.

– ಕೆ.ಜಿ.ಜಗದೀಶ್ ಸಿಇಒ ಮತ್ತು ಕಾರ್ಯದರ್ಶಿ, ಕಾಫಿ ಮಂಡಳಿ

ಕಳೆದೊಂದು ತಿಂಗಳಿಂದ ಕಾಫಿ ಬೀಜದ ಬೆಲೆ ಏರಿಕೆಯಾಗುತ್ತಲೇ ಇದೆ. ಕಳೆದ ವಾರವೇ ಅರೇಬಿಕಾ ಕೆಜಿಗೆ ಸುಮಾರು 160 ರೂ. ಹಾಗೂ ರೋಬಸ್ಟಾ ಕೆಜಿ.ಗೆ ಸುಮಾರು 200 ರೂ. ಹೆಚ್ಚಾಗಿದೆ. ಹಾಗಾಗಿ, ಕಾಫಿ ಪುಡಿ ಬೆಲೆ ಏರಿಕೆಯಾಗಿದ್ದು, ಒಳ್ಳೆಯ ಕಾಫಿ ಬೇಕೆಂದರೆ ಜನರು ಹೆಚ್ಚಿನ ಹಣ ತೆರಲೇಬೇಕಾಗುತ್ತದೆ.

– ಕೆ.ರಾಘವೇಂದ್ರ ರಾವ್ ನಿಜಗಲ್ ಕಾಫಿ ವರ್ಕ್ಸ್

### ಭಾರತದಲ್ಲಿ ಕಾಫಿ ಬೆಳೆ

| ವರ್ಷ | ಉತ್ಪಾದನೆ (ಮೆಟ್ರಿಕ್ ಟನ್) | ಮೌಲ್ಯ (ಡಾಲರ್‌ಗಳಲ್ಲಿ) | ಭಾರತೀಯ ಮೌಲ್ಯ (ಕೋಟಿ ರೂ.ಗಳಲ್ಲಿ) |
|---|---|---|---|
| 2023-24 | 3,96,000 | 1,146 | 8,983 |
| 2022-23 | 3,88,000 | 1,290 | 10,491 |
| 2024 ಏಪ್ರಿಲ್ | 40,434 | 155 | 1,290 |

**4,00,00 ಹೆಕ್ಟೇರ್** ಕರ್ನಾಟಕದಲ್ಲಿ ಕಾಫಿ ಬೆಳೆಯುವ ಪ್ರದೇಶ

**3,52,000 ಮೆಟ್ರಿಕ್ ಟನ್** ಕಳೆದ ವರ್ಷ ರಾಜ್ಯದಲ್ಲಿ ಕಾಫಿ ಉತ್ಪಾದನೆ

### ಶುಕ್ರವಾರದ ಮಾರುಕಟ್ಟೆ ದರ ಪ್ರತಿ ಕೆಜಿ (ವಾರದ ಹಿಂದಿನ ದರ)

| | |
|---|---|
| ರೋಬಸ್ಟಾ | 582 ರೂ.(448) |
| ಅರೇಬಿಕಾ | 620 ರೂ.(483) |

**04-05-2024 Vijayavani Pg 04**

---

# ಭಾರತದ ಮಣ್ಣಿಗೆ ಟ್ರ್ಯಾಕ್ಟರ್ ಸೂಕ್ತವಲ್ಲ




■ ಕೆ.ಎನ್.ಶೈಲೇಶ್ ಹೊಳ್ಳ

ಭಾರತದ ಪ್ರತಿ ನೂರು ರೈತರಲ್ಲಿ ಇಬ್ಬರಿಗೆ ಮಾತ್ರ ಟ್ರ್ಯಾಕ್ಟರ್ ಕೊಳ್ಳುವ ಶಕ್ತಿಯಿದ್ದು, ಶೇ.28 ರೈತರಿಗೆ ಜೀವಮಾನದಲ್ಲಿ ಟ್ರ್ಯಾಕ್ಟರ್ ಕೊಳ್ಳಲು ಸಾಧ್ಯವೇ ಇಲ್ಲ ಎನ್ನುವುದು ಸಮೀಕ್ಷೆಯಿಂದ ದೃಢಪಟ್ಟಿದೆ. ನಮ್ಮ ದೇಶದ ಅನೇಕ ಭಾಗಗಳು ಬೆಟ್ಟಗುಡ್ಡ ಮತ್ತು ಏರು ತಗ್ಗುಗಳಿಂದ ಕೂಡಿವೆ. ಇಂತಹ ಪ್ರದೇಶಗಳಲ್ಲಿ ಟ್ರ್ಯಾಕ್ಟರ್ ಉಪಯೋಗಿಸುವುದು ಕಷ್ಟಕರ. ಹೀಗಾಗಿ ಇಂದಿಗೂ ಸುಮಾರು 65 ರಿಂದ 75 ಭಾಗದ ರೈತರು ಉಳುಮೆಗೆ, ಸರಕು ಸಾಗಾಣಿಕೆಗೆ, ಗೊಬ್ಬರಕ್ಕೆ, ಕಾಳು ಒಕ್ಕಣೆಗೆ ಹಾಗೂ ಮತ್ತಿತರ ಕಾರ್ಯಗಳಿಗೆ ಮುಖ್ಯವಾಗಿ ಅವಶ್ಯಕವಾದ ಸಾಗಾಟಕ್ಕೆ ಎತ್ತಿನಗಾಡಿಗಳನ್ನೇ ಅವಲಂಬಿಸಿದ್ದಾರೆ. ಇನ್ನು ಈ ದೇಶದ ಒಟ್ಟು ಕೃಷಿ ಭೂಮಿಯಲ್ಲಿ ಶೇ.78 ಸಣ್ಣ ಹಿಡುವಳಿಗಳಾಗಿದ್ದು, ಇವುಗಳ ಸರಾಸರಿ ವಿಸ್ತೀರ್ಣ 1.95 ಹೆಕ್ಟೇರ್‌ಗಳಾಗಿವೆ. ಇಂತಹ ಭೂಮಿಗೆ ಟ್ರ್ಯಾಕ್ಟರ್ ಯಾವುದೇ ಕಾರಣಕ್ಕೂ ಸೂಕ್ತವಾಗುವುದಿಲ್ಲ. ಒಂದು ಸಮೀಕ್ಷೆಯಿಂದ ಟ್ರ್ಯಾಕ್ಟರ್‌ನ ಚಾಲನೆಯಿಂದ 25 ಡಿಗ್ರಿ ಸೆಲ್ಸಿಯಸ್‌ನಷ್ಟು ಶಾಖ ಉತ್ಪತ್ತಿಯಾಗುವುದು ಸಾಬೀತಾಗಿದೆ. ಹಾಗೆಯೇ ಟ್ರ್ಯಾಕ್ಟರ್ ಉಗುಳುವ ಹೊಗೆಯಿಂದ ಕಾರ್ಬನ್‌ನೊಂದಿಗೆ ಕಾರ್ಬನ್ ಡೈ ಆಕ್ಸೈಡ್‌ನಂತಹ ಅಪಾಯಕಾರಿ ಮಲಿನಗಳು ಗಾಳಿಗೆ ಸೇರುತ್ತಿದ್ದು ಪರಿಸರ ಮಾಲಿನ್ಯವಾಗುತ್ತಿದೆ.

**04-05-2024 V-karanataka Pg 02**

04-05-2024
V-karanataka Pg 02

# ತೆಂಗು ಬೆಳೆಗಾರರ ಹಿತಕಾಯದ ಬೆಂಬಲ!

■ ಶಶಿಧರ್ ಎಸ್. ದೋಣಿಹಕ್ಲು ತುಮಕೂರು
shashidara.ds@timesgroup.com

ಕನಿಷ್ಠ ಬೆಂಬಲ ಬೆಲೆ ಆಧಾರದಲ್ಲಿ ಸರಕಾರ ಕೊಬ್ಬರಿ ಖರೀದಿಸಿದರೆ ಮುಕ್ತ ಮಾರುಕಟ್ಟೆಯಲ್ಲಿ ಬೇಡಿಕೆ ಸೃಷ್ಟಿಯಾಗಿ ತೆಂಗು ಬೆಳೆಗಾರರಿಗೆ 'ಗರಿಷ್ಠ' ಲಾಭವಾಗಲಿದೆ ಎಂಬ ಲೆಕ್ಕಾಚಾರ ವಿಫಲವಾಗಿದೆ.



ಮುಕ್ತ ಮಾರುಕಟ್ಟೆಯಲ್ಲಿ ಕೊಬ್ಬರಿ ಧಾರಣೆ ಏರಿಕೆಯಾಗುವ ಲಕ್ಷಣವಿಲ್ಲ. ಈಗಾಗಲೇ ಸರಕಾರದಿಂದ ಖರೀದಿ ನಡೆಯುತ್ತಿದ್ದರೂ ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಾಲ್‌ಗೆ 9,000 ರೂ.ನಿಂದ 9,200 ರೂ. ಮಾತ್ರ ಇದೆ. ಕೇಂದ್ರ ಸರಕಾರದ 12,000 ರೂ. ಬೆಂಬಲ ಬೆಲೆ ಹಾಗೂ ರಾಜ್ಯ ಸರಕಾರದ 1,500 ರೂ. ಪ್ರೋತ್ಸಾಹ ಧನ ಸೇರಿ ಕ್ವಿಂಟಾಲ್‌ಗೆ 13,500 ರೂ.ಗೆ ಸರಕಾರ ಖರೀದಿಸುತ್ತಿದೆ. ಈ ವೇಳೆ ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಾಲ್‌ಗೆ ಕನಿಷ್ಠ 500 ರೂ. ಹೆಚ್ಚಾಗಿ ಕನಿಷ್ಠ 14,000 ರೂ. ಆದರೂ ಆಗಬೇಕಿತ್ತು. ಅದು ಆಗಿಲ್ಲ.

**ಪ್ರತಿ ವರ್ಷ ಇದೇ ಗೋಳು:** ಬೆಂಬಲ ಬೆಲೆಯ ಹಿಂದೆ ರೈತರನ್ನು ಪ್ರೋತ್ಸಾಹಿಸುವುದರ ಜತೆಗೆ ಮುಕ್ತ ಮಾರುಕಟ್ಟೆಯಲ್ಲಿ ಬೆಂಬಲ ಬೆಲೆಗಿಂತ ಜಾಸ್ತಿ ದರ ಸೃಷ್ಟಿಯಾಗಲಿ ಎಂಬ ಉದ್ದೇಶವೂ ಇರುತ್ತದೆ. ಆದರೆ, ಪ್ರತಿ ವರ್ಷವೂ ಬೆಂಬಲ ಬೆಲೆಯಡಿ ಖರೀದಿಗೆ ಮುನ್ನವಂತೂ ಮುಕ್ತಮಾರುಕಟ್ಟೆಯಲ್ಲಿ ಬೆಲೆ ಏರಿಕೆ ಆಗಿರುವುದಿಲ್ಲ. ಒಂದು ನಿರ್ದಿಷ್ಟ ಅವಧಿಯಲ್ಲಿ ಕೊಬ್ಬರಿ ಖರೀದಿ ಆಗುವುದರಿಂದ ಆ ಅವಧಿಯಲ್ಲೂ ಮುಕ್ತ ಮಾರುಕಟ್ಟೆಯಲ್ಲಿ ವ್ಯಾಪಾರಿಗಳು ಕಾದು ನೋಡುವ ತಂತ್ರ ಅನುಸರಿಸುತ್ತಾರೆ. ಆ ಬಳಿಕ ಯಥಾಸ್ಥಿತಿಯಲ್ಲಿ ಕಡಿಮೆ ದರದಲ್ಲೇ ಕೊಬ್ಬರಿ ಖರೀದಿಸುತ್ತಾರೆ.

**ವರ್ಷಪೂರ್ತಿ ಇದ್ದರೆ ಅನುಕೂಲ:** ಸರಕಾರ ಬೆಂಬಲ ಬೆಲೆ ಅಡಿ ನಿರ್ದಿಷ್ಟ ಪ್ರಮಾಣ ಮಿತಿ, ಅವಧಿ ಚೌಕಟ್ಟು ಹಾಕದೆ ವರ್ಷವಿಡೀ ನಿಗದಿತ ಬೆಲೆಗೆ ಖರೀದಿ ಮಾಡಲಾರಂಭಿಸಿದರೆ ಸಹಜವಾಗಿ ಮುಕ್ತಮಾರುಕಟ್ಟೆ ಸುಧಾರಿಸುತ್ತದೆ.

### ಖರೀದಿ ಹಣ ನೀಡದ ಸರಕಾರ

**ನೋಂದಣಿ ಪ್ರಕ್ರಿಯೆ ಮುಗಿದು ಏ.1ರಿಂದ ಖರೀದಿ ಪ್ರಕ್ರಿಯೆ ನಡೆಯುತ್ತಿದೆ. ನಿಯಮದ ಪ್ರಕಾರ ಖರೀದಿಯಾದ 3 ದಿನದೊಳಗೆ ರೈತರ ಬ್ಯಾಂಕ್ ಖಾತೆಗೆ ಹಣ ಡಿಬಿಟಿ ಮೂಲಕ ವರ್ಗಾವಣೆ ಆಗಬೇಕು. ಏ.15ರಂದು 'ವಿಕ' ವರದಿ ಪ್ರಕಟವಾದ ಬಳಿಕ ಏ.1ರಿಂದ 13ರವರೆಗೆ ಕೊಬ್ಬರಿ ಹಣವನ್ನು ಸರಕಾರ ರೈತರ ಖಾತೆಗೆ ಹಾಕಿತ್ತು. ಆದರೆ, ಈಗ ಮತ್ತೆ ಹಣ ಪಾವತಿ ಸ್ಥಗಿತವಾಗಿದೆ. ಏ.13ರಿಂದ ಇದುವರೆಗೆ ಖರೀದಿಯಾಗಿರುವ ಹಣ ನೀಡಿಲ್ಲ. ಜತೆಗೆ ಈಗಾಗಲೇ ಹಣ ನೀಡಿದವರಿಗೂ ಪೂರ್ಣ ಹಣ ಸಂದಾಯವಾಗಿಲ್ಲ. ಕೇಂದ್ರದ 12,000 ರೂ. ಮಾತ್ರ ಜಮೆ ಆಗಿದೆ. ರಾಜ್ಯ ಸರಕಾರದ 1,500 ರೂ. ಪ್ರೋತ್ಸಾಹ ಧನ ನೀಡಿಲ್ಲ.**

68 ತರಹೇವಾರಿ ಮಾವಿನ ಬೆಳೆ | ರೈತರಿಗೆ ಸರ್ಕಾರದ ಪರಿಹಾರ ಸಿಗಲಿ | ಮಂಡಿ ಮಾಲೀಕರು ಕಂಗಾಲು

# ಬಿಸಿಲಿನ ಝಳಕ್ಕೆ ಧರೆಗುರುಳಿದ ಮಾವಿನ ಫಸಲು

• ಜಿ.ಎಸ್. ಚಂದ್ರಶೇಖರ್

**ಶ್ರೀನಿವಾಸಪುರ:** ತಾಲೂಕಿನ ರೈತರ ಜೀವನಾಡಿ ಮಾವು, ಜಾಗತಿಕ ತಾಪಮಾನವೋ, ಪ್ರಕೃತಿಯ ಮುನಿಸೋ, ಮಾನವನ ಅತಿಯಾದ ಆಸೆಗೆ ಹಸಿರನ್ನು ಬಲಿಕೊಟ್ಟು ಅನುಭವಿಸುತ್ತಿರುವ ಶಾಪವೋ ಎನ್ನುವಂತೆ ಅತಿಯಾದ ಉಷ್ಣತೆಗೆ ಮನುಷ್ಯರೇ ತಾಳದ ಪರಿಸ್ಥಿತಿಯಲ್ಲಿ ಮಾವಿನ ಮರಗಳಲ್ಲಿನ ಮಾವು ಉದುರುತ್ತಿದ್ದು ರೈತರು ಕಂಗಾಲಾಗಿದ್ದಾರೆ.

ತಾಲೂಕಿನಲ್ಲಿ ಸುಮಾರು 57 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದ್ದು 68 ತರಹೇವಾರಿ ಮಾವಿನ ಬೆಳೆ ಇದೆ. ಬಾಯಲ್ಲಿ ನೀರೂರೆಸುವ ಬಾದಾಮಿ, ರಸಪುರಿ, ಮಲಗೂಬಾ, ದಶೇರಾ, ಬೇನೀಶಾ, ರಾಜಗೀರಾ ಹಣ್ಣುಗಳಿಗೆ ಜಗತ್ತಿನಾದ್ಯಂತ ಬೇಡಿಕೆ ಇದ್ದು ದೇಶ ವಿದೇಶಗಳಿಗೆ ರಫ್ತು ಮಾಡುತ್ತಿದ್ದ ಮಾವಿಗೆ ಬಿಸಿಯ ಗಾಳಿಯಿಂದಾಗಿ ಸ್ವಾದಿಷ್ಟ ಹಾಗೂ ಸಿಹಿ ರುಚಿಯಾದ ತಿನ್ನುವ ಬಾಯಿಗೆ ಈ ಭಾರಿ ಮಾವಿನ ಹಣ್ಣುಗಳಿಲ್ಲದೆ ಬಾಯಿ ಸಪ್ಪೆಯಾಗುವುದಂತೂ ಸತ್ಯವಾಗಿದೆ.

ದೇಶದ ಅತಿ ದೊಡ್ಡ ಮಾವಿನ ಮಾರುಕಟ್ಟೆ ಶ್ರೀನಿವಾಸಪುರ




ಪ್ರತಿ ವರ್ಷದಂತೆ ಮೇ ತಿಂಗಳಿನಲ್ಲಿ ಪ್ರಾರಂಭವಾಗ ಬೇಕಿದ್ದ ಮಾರುಕಟ್ಟೆ ಮಾವಿನ ಫಸಲು ಇಲ್ಲದ ಕಾರಣ ಕೇವಲ ಬೆರಳೆಣಿಕೆಯ ಮಂಡಿಗಳು ಮಾತ್ರ ಪ್ರಾರಂಭವಾಗಿ ಮಾರುಕಟ್ಟೆಯೂ ಬಣಗುಡುತ್ತಿದೆ. ಮಾರುಕಟದಟೆಯಲ್ಲಿ ಕೆಲಸ ಮಾಡಲು ಪಕ್ಕದ ರಾಜ್ಯಗಳಾದ ಆಂದ್ರಪ್ರದೇಶ ಮತ್ತು ತಮಿಳುನಾಡಿನಿಂದ ಸಾವಿರಾರು ಜನ ಕೂಲಿ ಕಾರ್ಮಿಕರ ಕೈಗಳಿಗೆ ಕೆಲಸವಿಲ್ಲದಂತಾಗಿದೆ. ತುಂಬಿದ ಮಾರುಕಟ್ಟೆಯಲ್ಲಿ ಜನ ಸಂದಣಿ ಮತ್ತು ರಾಶಿ ರಾಶಿ ಮಾವಿನ ಫಸಲು ನೋಡುವುದೇ ಆನಂದ, ನೀಲಂ ಮತ್ತು ತೋತಾಪುರಿ ಇಳುವರಿ ಯಾವಾಗಲೂ ಹೆಚ್ಚಾಗಿರುತ್ತದೆ.

ಈ ಭಾರಿ ಅದರಲ್ಲೂ ಸಹ ಕಡಿಮೆಯಾಗಿದೆ, ಇದು ದೇಸದ ವಿವಿಧ ಬಾಗಗಳಲ್ಲಿರುವ ಹಣ್ಣು ಸಂಸ್ಕರಣ ಕಾರ್ಖಾನೆಗಳಿಗೆ ಸಾವಿರಾರು ಟನ್ನುಗಳ ಮಾವು ಸರಬರಾಜು ಮಾಡಲಾಗುತ್ತಿತ್ತು. ಮಾವನ್ನು ಖರೀದಿಸಲು ದೇಶದ ನಾನಾ ರಾಜ್ಯಗಳಿಂದ ಸಾವಿರಾರು ವ್ಯಾಪಾರಿಗಳು ಬರುತ್ತಿದ್ದರು. ಬಿಸಿಲಿನ ತಾಪಮಾನಕ್ಕೆ ಮನೆಯಿಂದ ಹೊರ ಬರುವುದೇ ದುಸ್ಥರವಾಗಿರಬೇಕಾದರೆ ಇನ್ನು ವ್ಯಾಪಾರಸ್ಥರು ಬೇರೆ ರಾಜ್ಯಗಳಿಂದ ಬರುವುದಾದರೂ ಹೇಗೆ ಮತ್ತು ಅಲ್ಪ

> **"ತಾಲೂಕಿನ ಶೇ.60 ಜನರು ಮಾವಿನಿಂದಲೇ ಜೀವನ ನಡೆಸುತ್ತಿದ್ದಾರೆ. ಮಾವಿನ ಫಸಲು ಬಿಸಿಲಿನಿಂದ ಮತ್ತು ಮಳೆ ಇಲ್ಲದೆ ಸಂಪೂರ್ಣವಾಗಿ ನಾಶವಾಗಿರುವುದರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿಶೇಷ ಅಧಿಕಾರಿಗಳ ತಂಡಗಳನ್ನು ರಚಿಸಿ ಮಾವಿನ ತೋಟಗಳಿಗೆ ಭೇಟಿ ನೀಡಿ ಮಾವು ಬೆಳೆಗಾರರ ಸಂಕಷ್ಟವನ್ನು ಆಲಿಸಬೇಕಾಗಿದೆ.**
> ■ ನೀಲಟೂರು ಚಿನ್ನಪ್ಪರೆಡ್ಡಿ, ಅಧ್ಯಕ್ಷ, ಜಿಲ್ಲಾ ಮಾವು ಬೆಳೆಗಾರರ ಸಂಘ

ಸ್ವಲ್ಪ ಬೆಳೆದ ಮಾವಿನ ವಹಿವಾಟು ನಡೆಸುವುದಾದರೂ ಹೇಗೆ ಎಂದು ಮಾರುಕಟ್ಟೆ ಮಂಡಿ ಮಾಲೀಕರು ಕಂಗಾಲಾಗಿದ್ದಾರೆ. ರೈತರು ತರುವ ಮಾವಿಗೆ ವ್ಯಾಪಾರಸ್ಥರು ಖರೀದಿ ಮಾಡಿದರೆ ಮಾತ್ರ ರೈತರ ಮಾವಿಗೆ ಹಣ ನೀಡಲು ಸಾಧ್ಯ, ಖರೀದಿಯೇ ಆಗದೆ ಹೋದರೆ ಇನ್ನು ರೈತರ ಮಾವು ಮಾರಾಟ ಮಡುವುದಾದರೂ ಹೇಗೆ ಎಂದು ಚಿಂತಾಕ್ರಾಂತರಾಗಿದ್ದಾರೆ.

04-05-2024
Hosadiganta Pg 02

ಅರೇಬಿಕಾ ದರವೂ ಇಳಿಕೆ: ಬೆಳೆಗಾರರಲ್ಲಿ ಆತಂಕ

# ರೊಬಸ್ಟಾ ಕಾಫಿ ಧಾರಣೆ ಕುಸಿತ

• ರವಿ ಕೆಳಂಗಡಿ

**ಕಳಸ (ಚಿಕ್ಕಮಗಳೂರು ಜಿಲ್ಲೆ):** ಕಳೆದ ವಾರ ಏರಿಕೆ ಕಂಡಿದ್ದ ರೊಬಸ್ಟಾ ಹಾಗೂ ಅರೇಬಿಕಾ ಕಾಫಿ ಧಾರಣೆಯು ಇಳಿಕೆಯಾಗುತ್ತಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ.

ಪ್ರತಿ ಕೆ.ಜಿ.ಗೆ ₹400 ಮುಟ್ಟಿದ್ದ ರೊಬಸ್ಟಾ ಕಾಫಿ ದರವು ಸದ್ಯ ₹330ಕ್ಕೆ ಇಳಿದಿದೆ. ಕೆ.ಜಿ.ಗೆ ₹350ಕ್ಕೆ ತಲುಪಿದ್ದ ಅರೇಬಿಕಾ ಕಾಫಿ ಬೆಲೆಯು ₹300ಕ್ಕೆ ಕುಸಿದಿದೆ.

ಗುರುವಾರ ರಾತ್ರಿ ಲಂಡನ್ ಮಾರುಕಟ್ಟೆಯಲ್ಲಿ ರೊಬಸ್ಟಾ ಕಾಫಿಯು ಶೇ7.5ರಷ್ಟು ಮೌಲ್ಯ ಕಳೆದುಕೊಂಡರೆ, ಅರೇಬಿಕಾ



ಶೇ 4.5ರಷ್ಟು ಮೌಲ್ಯ ಕಳೆದುಕೊಂಡಿದೆ. ಕಳೆದ ವಾರ ಪ್ರತಿ ಟನ್‌ಗೆ ಗರಿಷ್ಠ 4,165 ಡಾಲರ್‌ಗೆ ಏರಿಕೆಯಾಗಿದ್ದ ರೊಬಸ್ಟಾ ಧಾರಣೆಯು, 3,630 ಡಾಲರ್‌ಗೆ ಇಳಿಕೆಯಾಗಿದೆ ಎನ್ನುತ್ತಾರೆ ಮಾರುಕಟ್ಟೆ ತಜ್ಞರು.

ಕಾಫಿ ಮಾರುಕಟ್ಟೆಯಲ್ಲಿ ಮಾರಾಟದ ಒತ್ತಡ ಹೆಚ್ಚಿದ್ದರಿಂದ ಈ ಕುಸಿತ ಉಂಟಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ರೊಬಸ್ಟಾ ಧಾರಣೆಯು ಮುಂದಿನ ವರ್ಷದವರೆಗೆ ಹೆಚ್ಚಳವಾಗುವುದು ಅನುಮಾನ. ಆದರೆ, ಬೆಲೆ ತೀರಾ ಕುಸಿಯಲಾರದು ಎಂಬುದು ಅನುಭವಿ ಬೆಳೆಗಾರರ ಅಭಿಪ್ರಾಯ.

ಸ್ಥಳೀಯ ಕಾಫಿ ಮಾರುಕಟ್ಟೆಯಲ್ಲಿ ಮೂಟೆಗೆ (50 ಕೆ.ಜಿ.) ₹10,500ಕ್ಕೆ ಏರಿದ್ದ ರೊಬಸ್ಟಾ ಬೆಲೆಯು ಈಗ ₹8,500ಕ್ಕೆ ಕುಸಿದಿದೆ. ಬಹುತೇಕ ಬೆಳೆಗಾರರು ಈಗಾಗಲೇ ಉತ್ಪನ್ನ ಮಾರಾಟ ಮಾಡಿದ್ದರೂ ಕೆಲವು ಬೆಳೆಗಾರರು ಇನ್ನಷ್ಟು ಬೆಲೆ ಏರಿಕೆಯ ನಿರೀಕ್ಷೆಯಿಂದ ದಾಸ್ತಾನು ಮಾಡಿದ್ದರು. ಅಂತಹ ಬೆಳೆಗಾರರು ಈಗ ಆತಂಕಗೊಂಡಿದ್ದಾರೆ.

04-05-2024
Prajavani Pg 10